ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 4, September-October 2023, Pp. 94-100
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಉತ್ತಮ ಕಲಾವಿದರನ್ನು ರೂಪಿಸುವಲ್ಲಿ ಗುಬ್ಬಿ ನಾಟಕ ಕಂಪನಿಯ ಪಾತ್ರ

**ಪ್ರೊ.ಎಲ್.ಪಿ. ರಾಜು[1] ಮತ್ತು ಕುಮಾರಸ್ವಾಮಿ ಟಿ.ಪಿ[2]**

[1]ಪ್ರಾಧ್ಯಾಪಕರು ಮತ್ತು [2] ಸಂಶೋಧನಾ ವಿದ್ಯಾರ್ಥಿ

ಇತಿಹಾಸ ಮತ್ತು ಪುರಾತತ್ವ ಸಂಶೋಧನಾ ಅಧ್ಯಯನ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

***Abstract:***

*ಕರ್ನಾಟಕ ರಾಜ್ಯವು ಆಕರ್ಷಕ ರಂಗಭೂಮಿಯನ್ನು ಹೊಂದಿದೆ. ರಾಜ್ಯವು ತನ್ನ ಪ್ರದರ್ಶಕ ಕಲೆಗಳಿಂದ ಶ್ರೀಮಂತವಾಗಿದೆ ಮತ್ತು ಸಮಾಜದ ವಿವಿಧ ನಕ್ಷತ್ರಗಳ ನಟರ ಗುಂಪು, ಜೊತೆಗೆ ನಾಟಕ ಕಂಪನಿಗಳ ಪ್ರದರ್ಶನಗಳು ಕಲಾತ್ಮಕ ಅಲಂಕಾರದ ಮೂಲಕ ತಮ್ಮ ಸಾಮರ್ಥ್ಯವನ್ನು ಕೊಡುಗೆಯಾಗಿ ನೀಡುತ್ತವೆ. ಅದಲ್ಲದೆ ತಮ್ಮ ಮನೋರಂಜನೆಯನ್ನು ಜನಪ್ರಿಯಗೊಳಿಸಲು ಸ್ಥಳದಿಂದ ಸ್ಥಳಕ್ಕೆ ಪ್ರಯಾಣಿಸುತ್ತಾ, ವೃತ್ತಿಪರ ಕಲಾವಿದರು ಯುಗದ ಭವ್ಯತೆಯನ್ನು ಪ್ರತಿನಿಧಿಸಲು ತಮ್ಮ ಪ್ರತಿಭೆಯನ್ನು ದಾನ ಮಾಡಿದರು. ಅಂದಿನ ಸಮಯದಲ್ಲಿ ಜನಪ್ರಿಯತೆಗಾಗಿ ಉತ್ತಮ ಕಲಾವಿದರನ್ನ ಆಯ್ಕೆ ಮಾಡಿಕೊಳ್ಳುತ್ತಿದ್ದರು. ಕಲಾವಿದರನ್ನು ಉತ್ತಮ ಕಲಾವಿದರನ್ನಾಗಿ ರೂಪಿಸುವಲ್ಲಿ ಅವರಿಗೆ ಮಾರ್ಗದರ್ಶನ ನೀಡುತ್ತಾ ಅವರನ್ನು ನಾಟಕ ಕಂಪನಿಯಲ್ಲಿ ಪಳಗಿಸುತ್ತಿದ್ದರು. ಅದೇ ರೀತಿ ನಾಟಕ ಕಂಪನಿಗಳಲ್ಲಿ ಪ್ರಮುಖವಾದ ಗುಬ್ಬಿ ಶ್ರೀ ಚನ್ನಬಸವೇಶ್ವರ ಕೃಪಾಪೋಷಿತ ನಾಟಕ ಮಂಡಳಿಯೂ ಕೂಡ ತನ್ನದೇ ಆದಂತಹ ಇತಿಹಾಸ ಬೆಳವಣಿಗೆ ಹಾಗೂ ವಿಶಿಷ್ಟತೆಯನ್ನು ಹೊಂದಿದ್ದು, ಅನೇಕ ಅನೇಕ ಉತ್ತಮ ಕಲಾವಿದರನ್ನು ತನ್ನ ಕಂಪನಿಯಲ್ಲಿ ಪಳಗಿಸಿ ರೂಪಿಸಿದೆ. ಅಂತಹ ಉತ್ತಮ ಕಲಾವಿದರ ರೂಪಿಸುವಲ್ಲಿ ಗುಬ್ಬಿ ಕಂಪೆನಿಯ ಪಾತ್ರವೇ ಈ ಲೇಖನದ ಮುಖ್ಯ ವಿಷಯ.*

***Keywords:*** *ಗುಬ್ಬಿ ಶ್ರೀ ಚನ್ನಬಸವೇಶ್ವರ ಕೃಪಾಪೋಷಿತ ನಾಟಕ ಮಂಡಳಿ, ನಾಟಕ, ಕಲಾವಿದ, ವೃತ್ತಿ ರಂಗಭೂಮಿ, ಗುಬ್ಬಿ ವೀರಣ್ಣ.*

## ಪೀಠಿಕೆ

"ನಾಟಕ ಕಲೆಗಳು" ಇದು ಸಾಹಿತ್ಯದ ಪ್ರಕಾರವೂ ಕೂಡ ಆಗಿದ್ದು ರಂಗಸಜ್ಜಿಕೆಯನ್ನು ಏರ್ಪಡಿಸುವಂತಹ ಕಲೆ. ಅನಾದಿಕಾಲದಿಂದಲೂ ನಾಟಕಗಳನ್ನು ಜನರು ಕಲಾವಿದರು ನಡೆಸುತ್ತಾ ಬಂದಿದ್ದಾರೆ. ಈ ನಾಟಕ ಕಲೆ ರಂಗವೇದಿಕೆಗಳು ಜನರ ಮನೋರಂಜನೆಗಾಗಿ, ಅಭಿವ್ಯಕ್ತಿಯಾಗಿ, ತನ್ನಲ್ಲಿನ ಕಲೆಯ ಪ್ರದರ್ಶನಕ್ಕಾಗಿ ಒಂದು ವಿಷಯವನ್ನು ತಿಳಿಯಲು, ಒಂದು ವಿಷಯದ ತಿಳುವಳಿಕೆಗಾಗಿ, ಸಂತೋಷಕ್ಕಾಗಿ ನಡೆಸುತ್ತಿದ್ದರು. ಈ ನಾಟಕಗಳನ್ನು ವಿಶೇಷ ದಿನಗಳಲ್ಲಿ ಅಂದರೆ, ಹಬ್ಬ, ಹರಿದಿನ, ಜಾತ್ರೆ, ಶುಭ ಕಾರ್ಯಗಳು ಇಂತಹ ಇತರೆ ಸಮಯ ಸಂದರ್ಭಗಳಲ್ಲಿ ನಾಟಕ ಪ್ರದರ್ಶನಗಳು ನಡೆಯುತ್ತಿದ್ದವು. ಅದರಲ್ಲಿಯೂ ಹಳ್ಳಿಗಳಲ್ಲಿ ಸುಗ್ಗಿ ನಂತರದ ಅವಧಿಯಲ್ಲಿಯೇ ಹೆಚ್ಚು ನಾಟಕ ನಡೆಯುತ್ತಿದ್ದವು. ಸುಗ್ಗಿ ನಂತರ ಹಳ್ಳಿಯ ಜನರಿಗೆ ಬಿಡುವಿನ ಸಮಯ.

***Please cite this article as:*** *ರಾಜು ಎಲ್.ಪಿ. & ಕುಮಾರಸ್ವಾಮಿ ಟಿ.ಪಿ.* (2023). ಉತ್ತಮ ಕಲಾವಿದರನ್ನು ರೂಪಿಸುವಲ್ಲಿ ಗುಬ್ಬಿ ನಾಟಕ ಕಂಪನಿಯ ಪಾತ್ರ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 2(4), 94–100.

ಇಲ್ಲಿ ಗುಂಪು ಸೇರಿ ರಚನೆಗೊಂಡಂತಹ ಒಂದೊಂದು ಗುಂಪೇ ನಾಟಕ ಮಂಡಳಿಗಳಾಗಿ, ಮುಂದೆ ಅವು ಕಂಪನಿಗಳಾಗುತ್ತವೆ. ವೃತ್ತಿರಂಗಭೂಮಿಯಲ್ಲಿ ನಿಯತವಾಗಿ ದಿನ ಪ್ರತಿ ಒಂದು ತಂಡದ ನಟರು ನಾಟಕವಾಡುವುದು, ಪ್ರವೇಶಧನ ನೀಡಿ ಜನರು ನೋಡುವಂತೆ ಇರಲಿಲ್ಲ, ಉದ್ಯಮದಂತೆ ಬಂಡವಾಳ ಹಾಕಿ ಸಂಘಟಿಸುವಂತೆ ಇರಲಿಲ್ಲ, ಜೀವನ ನಿರ್ವಹಣೆಗಾಗಿ ನಾಟಕವನ್ನೇ ವೃತ್ತಿಯನ್ನಾಗಿ ಮಾಡಿಕೊಂಡವರಿಂದ ಹುಟ್ಟಿಕೊಂಡ ರಂಗಭೂಮಿ ಪ್ರಕಾರವನ್ನು ಮುಂದೆ ವೃತ್ತಿರಂಗಭೂಮಿ ಎಂದು ಕರೆಯಲಾಯಿತು. ಇದು ಪಾಶ್ಚಾತ್ಯ ಪ್ರಭಾವದಿಂದಲೇ ಉದಯಿಸಿತು.

19ನೇ ಶತಮಾನದ ಅಂತ್ಯದಲ್ಲಿ ಮತ್ತು 20ನೇ ಶತಮಾನದ ಆರಂಭದ ಒಂದೆರಡು ದಶಕಗಳಲ್ಲಿ ಹುಟ್ಟಿಕೊಂಡ ಕನ್ನಡ ರಂಗಭೂಮಿ, ತಮ್ಮ ಕಾರ್ಯ ಚಟುವಟಿಕೆಗಳನ್ನು ವಿಸ್ತರಿಸಿಕೊಂಡು ಬೆಳೆದ ಕೆಲವು ಪ್ರಮುಖ ವೃತ್ತಿ ಸಂಸ್ಥೆಗಳಲ್ಲಿ ಗುಬ್ಬಿ ಶ್ರೀ ಚನ್ನಬಸವೇಶ್ವರ ಕೃಪಾಪೋಷಿತ ನಾಟಕ ಮಂಡಳಿಯೂ ಸಹ ಒಂದು. 1884ನೇ ವರ್ಷದಲ್ಲಿ ತುಮಕೂರು ಜಿಲ್ಲೆಯ ಗುಬ್ಬಿಯ ಕಲಾಭಿಮಾನಿಗಳು ನಾಟಕ ಸಂಘ ಕಟ್ಟಿ ಮೊದಲು ಕುಮಾರರಾಮನ ಕಥೆಯನ್ನು ಯಕ್ಷಗಾನದ ರೂಪದಲ್ಲಿ ಪ್ರದರ್ಶಿಸಿದರು. ಅದೇ ದಿನ ಆಕಸ್ಮಾತಾಗಿ ಗುಬ್ಬಿಯಲ್ಲಿದ್ದ ಚಾಮರಾಜೇಂದ್ರ ಒಡೆಯರು ನಾಟಕವನ್ನು ನೋಡಿ ಹಲವು ಕಡೆ ಪ್ರದರ್ಶನ ಏರ್ಪಡಿಸಿದರು. ಹೀಗೆ ಹಲವು ನಾಟಕ ಪ್ರದರ್ಶನಗಳಿಂದ ಯಶಸ್ವಿಯಾಗಿತ್ತು. ಗುಬ್ಬಿಯ ಚಂದ್ರಣ್ಣ, ಅಜೀಬ್ ಸಾಹೇಬ್ ಮತ್ತು ನೀಲಕಂಠಪ್ಪನವರ ನೇತೃತ್ವದಲ್ಲಿ ಆರಂಭಗೊಂಡು ಕ್ರಮೇಣ ಗುಬ್ಬಿ ಚಂದ್ರಣ್ಣನವರೇ ಮಾಲೀಕರಾದರು.

ಕನ್ನಡ ವೃತ್ತಿರಂಗ ಭೂಮಿಯಲ್ಲಿ ವರ್ಣಮಯವಾದ ವ್ಯಕ್ತಿತ್ವಕ್ಕೆ ಹೆಸರಾದಂತಹ ಗುಬ್ಬಿ ವೀರಣ್ಣನವರು ಈ ಕಂಪನಿಗೆ 1896ರಲ್ಲಿ ಆರು ವರ್ಷದ ಬಾಲನಟನಾಗಿ ಸೇರಿ, ಬಾಲ್ಯದಿಂದ ಮುಪ್ಪಿನವರೆಗೂ ಇಲ್ಲಿಯೇ ಎಲ್ಲವನ್ನು ಕಲಿತು ಪಳಗಿದರು. ಇವರ ಜನ್ಮ ಕಥೆ ಎಂದರೆ ಗುಬ್ಬಿ ಕಂಪನಿಯ ಇತಿಹಾಸವೇ ಆಗುತ್ತದೆ. ಉತ್ತಮ ಸಾಹಸ ಪ್ರವೃತ್ತಿಯ ನಟರು ಆಗಿ ಬಹುಬೇಗ ಕಂಪನಿಯ ಪ್ರಮುಖ ವ್ಯಕ್ತಿಗಳಲ್ಲಿ ಒಬ್ಬರಾದರೂ. 1917ರಲ್ಲಿ ಚಂದ್ರಣ್ಣನವರು ನಿಧನರಾದ ಮೇಲೆ ಜಂಟಿ ಮಾಲೀಕತ್ವದಲ್ಲಿ ಕಂಪನಿಯ ಆಡಳಿತದ ಚುಕ್ಕಾಣಿ ಹಿಡಿದುಕೊಂಡರು. ನಂತರದಲ್ಲಿ ಅನೇಕ ಕಡೆ ಪ್ರವಾಸ–ಪ್ರದರ್ಶನ ಕೈಗೊಂಡು, ದಕ್ಷಿಣ ಭಾರತದಲ್ಲಿ ಗುಬ್ಬಿ ಕಂಪನಿ ಹೆಸರು ಮೂಡಿತು. 1920ರ ವೇಳೆಗೆ ಕಂಪನಿಯ ಮಾಲೀಕತ್ವ ವೀರಣ್ಣನವರಿಗಾಯಿತು.

ಈ ನಾಟಕ ಮಂಡಳಿಯೊಂದಿಗೆ ಒಂದಲ್ಲ ಒಂದು ಬಾರಿ ಸಂಪರ್ಕವನ್ನು ಪಡೆಯದ ಕನ್ನಡ ಕಲಾವಿದರೇ ಇಲ್ಲವೆಂದರೆ ತಪ್ಪಾಗಲಾರದು. 1924ರ ವೇಳೆಗೆ ಈ ಮಂಡಳಿಯು ಬೆಂಗಳೂರಿನಲ್ಲಿ ತನ್ನದೇ ಆದ ಒಂದು ಸ್ವಂತ ಸುಸಜ್ಜಿತ ನಾಟಕ ಶಾಲೆಯನ್ನು ಹೊಂದಿತು. ಚಿಕ್ಕ ಮಕ್ಕಳಿಗಾಗಿಯೇ ಒಂದು ಪ್ರತ್ಯೇಕ ಬಾಲ ಕಲಾವರ್ದಿನಿ ನಾಟಕ ಸಂಘವೆಂಬುದನ್ನು ಗುಬ್ಬಿ ವೀರಣ್ಣನವರು ತಮ್ಮ ಕಂಪನಿಯ ಶಾಖೆಯಾಗಿ ಕಟ್ಟಿದರು. ಮುಳುಗುವುದರಲ್ಲಿದ್ದ ಗದುಗಿನ ನಾಟಕ ಸಂಘವೊಂದನ್ನು ವಹಿಸಿಕೊಂಡು, 1926ರ ಹೊತ್ತಿಗೆ ವೀರಣ್ಣನವರ ಕಂಪನಿಗಳು ಮೂರಾಗಿ, ಒಟ್ಟು ಇವರ ಪೋಷಣೆಗೆ ಒಳಪಟ್ಟ ನಟ ನಟಿಯರು 250ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿದ್ದರು. 1930ರ ಹೊತ್ತಿಗೆ ದಕ್ಷಿಣ ಭಾರತದ ಮತ್ತೊಂದು ನಾಟಕ ಶಾಲೆಯನ್ನು ಬೆಂಗಳೂರಿನಲ್ಲಿ ನಿರ್ಮಿಸಿದರು. ಗುಬ್ಬಿ ಕಂಪನಿಯಲ್ಲಿ ಆಗ ನೂರಾರು ನಟ ನಟಿಯರಲ್ಲದೆ ಆನೆ, ಕುದುರೆ, ಜಿಂಕೆ, ಗಿಳಿ, ನವಿಲು ಇತ್ಯಾದಿ ಹಲವು ಪ್ರಾಣಿ ಪಕ್ಷಿ ನಟರು ಸೇರ್ಪಡೆಯಾಗಿದ್ದರು. ನೋಡುವವರಿಗೆ ಅದೊಂದು ಸರ್ಕಸ್ ಕಂಪನಿ ಎಂಬ ಭ್ರಮೆಯು ಉಂಟಾದುದುಂಟು.

ಪೌರಾಣಿಕ ನಾಟಕಗಳನ್ನು ಹೆಚ್ಚಾಗಿ ಪ್ರಯೋಗಿಸುತ್ತಿದ್ದ ಗುಬ್ಬಿ ಕಂಪನಿ ಕುರುಕ್ಷೇತ್ರ ನಾಟಕದಲ್ಲಿ ದಿಗ್ವಿಜಯವನ್ನೇ ಸಾಧಿಸಿತು. ಮೊದಲು ವೀರಪ್ಪ ಶಾಸ್ತ್ರಿಗಳು, ಬಳಿಕ ಬೆಳ್ಳಾವಿ ನರಹರಿ

ಶಾಸ್ತ್ರಿಗಳು, ಬಿ.ಪುಟ್ಟಸ್ವಾಮಯ್ಯನವರು ನಾಟಕಕಾರರಾಗಿ ಕಂಪನಿ ಕೀರ್ತಿಯನ್ನು ಹೆಚ್ಚಿಸಿದರು. ಗುಬ್ಬಿ ಕಂಪನಿಯು ಅನೇಕ ಕಲಾವಿದರನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿತು. ಅಂದರೆ ಕಲಾಭಿಮಾನಿಗಳಿಗಾಗಿ, ಕಲಾವಿದರಿಗೆ ಇದೊಂದು ಮುಖ್ಯ ವೇದಿಕೆಯಾಗಿತ್ತು. ತಮ್ಮಲ್ಲಿರುವ ಕಲೆಯನ್ನು ಪ್ರದರ್ಶಿಸುವುದಕ್ಕೆ ತಮ್ಮಲ್ಲಿನ ಕಲಾಭಿಮಾನದ ಕಲಾ ಸರಸ್ವತಿಯ ಪುತ್ರರನ್ನು ಹುಟ್ಟು ಹಾಕುವಲ್ಲಿ ಈ ಗುಬ್ಬಿ ಕಂಪನಿಗೆ ಆಭಾರಿ ಈ ಕಲಾವಿದರು.

ಮೊದಲೇ ಹೇಳಿದಂತೆ ಈ ಗುಬ್ಬಿ ಕಂಪನಿಯ ಪೋಷಣೆಗೆ ಒಳಪಟ್ಟಂತಹ ನಟ ನಟಿಯರು 250ಕ್ಕೂ ಹೆಚ್ಚು ಜನರು ಇದ್ದರು. ಕಲಾವಿದನು ಕಲೆಯನ್ನು ಸೃಷ್ಟಿಸುವ, ಕಲೆಗಳನ್ನು ಅಭ್ಯಾಸ ಮಾಡುವ ಅಥವಾ ಕಲೆಯನ್ನು ಪ್ರದರ್ಶಿಸುವುದಕ್ಕೆ ಸಂಬಂಧಿಸಿದ ಚಟುವಟಿಕೆಯಲ್ಲಿ ತೊಡಗಿರುವ ವ್ಯಕ್ತಿ. ನಟನೆಯು ಪ್ರೇಕ್ಷಕರ ಕಣ್ಣು–ಕಿವಿಗಳಿಗೆ ಹಬ್ಬ ಮಾಡುವಂತೆ ಇರುವ ಪಣ. ಅವರದು ಹೀಗೆಂದ ಮಾತ್ರಕ್ಕೆ ಅಲ್ಲಿ ಬುದ್ಧಿಯ ಮಾತಿಗೆ ಬರಗಾಲವೆಂದಲ್ಲ, ಆದರೆ ಕಣ್ಣು ಕಿವಿಗಳನ್ನು ಮೊದಲು ದೃಶ್ಯಾವಳಿಗಳಿಂದ, ಅಭಿನಯದಿಂದ, ಸಂಗೀತದಿಂದ ತುಂಬಿ, ನಂತರ ಒಳಗಣ್ಣು ತೆರೆಯಿಸುವ ನೀತಿ ಅವರದು. ಆದ್ದರಿಂದಲೇ ಅಂದಿನ ನಾಟಕಕ್ಕೆ ಅಂತಹ ಆಕರ್ಷಣೆ, ಕಲಿತವನಿಗೂ–ಕಲಿಯದಿದ್ದವನಿಗೂ, ಹೆಣ್ಣಿಗೂ–ಗಂಡಿಗೂ, ಮಗುವಿಗೂ ಅವರ ನಾಟಕವೆಂದರೆ ಒಂದು ಹಬ್ಬ, ಕಣ್ಣಿದ್ದಂತೆ ಕಲಿಕೆ ಅಲ್ಲ.

ಅನೇಕ ಪಡಬಾರದ ಪಾಡು ಪಟ್ಟರೂ ವೀರಣ್ಣನವರು ದೊಡ್ಡ ಛಲದಿಂದ ಅವರು ಕಂಪನಿಯನ್ನು ಬೆಂಬಿಡದೆ ಮುನ್ನಡೆಸಿದರು. ವಿಜಯದಿಂದ ವಿಜಯಕ್ಕೆ ನುಗ್ಗಿಸಿಕೊಂಡು ಹೋಗುವಲ್ಲಿ ಹಠ ಬಿಡದ ಅವರ ಆ ನಮ್ರತೆ ದೊಡ್ಡ ಪಾತ್ರ ವಹಿಸಿತು. ಹುಟ್ಟು ದಯಾವಂತ, ಕರುಣೆ, ನಮ್ಮ, ತಮ್ಮ ನಾಟಕ ಕಂಪನಿಯ ಕಲಾವಿದರ ಮದುವೆ, ಮಕ್ಕಳ ಮುಂಜಿ, ಸಾಲ ಸೋಲ ತೀರಿಸಲು ಹಣ, ಒಂದೇ–ಎರಡೇ? ಒಬ್ಬರಿಗೆ ಇಬ್ಬರಿಗೆ? ಇನ್ನೆಲ್ಲ ಮರೆತರು ಅವರಂತೆ, ರಂಗದ ಬಳಗಕ್ಕೆಲ್ಲ ಒಂದು ದಿನವೂ ತುಪ್ಪ ಮೊಸರಿನ ಊಟ ಹಾಕಿ ತಿಂಗಳಾಗುವಲ್ಲಿ ಕೂರುವಕ್ಕಾಗಿ ಸಂಬಳ ಕೊಟ್ಟ ಶಕ್ತಿವಂತ ಯಾರು ಎಂದು ಹುಡುಕಿ ನೋಡಬೇಕಾಗುತ್ತದೆ. ಅದು ಹತ್ತು ಇಪ್ಪತ್ತೆ? ನೂರಾರು ಮಂದಿಗೆ, ತಲಾ ಐವತ್ತರಿಂದ ಮುನ್ನೂರೈವತ್ತರವರೆಗೆ!

ರಂಗಭೂಮಿ ನಿಜವಾಗಿ ಬೆಳಗಬೇಕಾದರೆ, ಓದದವನ ವಿದ್ಯಾಲಯವಾಗಬೇಕಾದರೆ, ಅದು ಎಲ್ಲಾ ಲಲಿತ ಕಲೆಗಳ ಸಂಗಮ ಕ್ಷೇತ್ರವೇ ಆಗಬೇಕೆಂದು ನೆರೆನಂಬಿ, ಸಾಹಿತ್ಯ, ಸಂಗೀತ, ನೃತ್ಯ, ದೃಶ್ಯಲಕ್ಷಣ, ಪಾತ್ರ, ವೈವಿಧ್ಯ, ವಿಶಿಷ್ಟಗಳಿಗೆ ತಮ್ಮ ನಾಟಕಗಳಲ್ಲಿ ಹದವರಿತು ಸ್ಥಳವಿದ್ದರೂ ಅದರಿಂದಾಗಿ ಅವರ ನಾಟಕ ಭಿನ್ನರಾಶಿಯ ಜನರಿಗೆ ಏಕ ಸಮಾರಾಧನೆಯಾಯಿತು.

ಗುಬ್ಬಿ ಕಂಪನಿಗೆ ಅಂದರೆ ಗುಬ್ಬಿ ಶ್ರೀ ಚನ್ನಬಸವೇಶ್ವರ ಸ್ವಾಮಿ ಕೃಪಾಪೋಷಿತ ನಾಟಕ ಮಂಡಳಿಗೆ ಯಾರಾದರೂ ಆಗಲಿ ತಮ್ಮ ಕಲೆಯನ್ನು ತೋರಿಸಲು, ಕಂಪನಿಗೆ ಸೇರಲು, ರಂಗವೇದಿಕೆಗೆ ಸೇರಲು, ಹವ್ಯಾಸಿಗಳು ಕಲಾ ಸರಸ್ವತಿಯನ್ನು ಒಲಿಸಿಕೊಳ್ಳಲು, ಜೀವನ ಮಾರ್ಗಕ್ಕಾಗಿ ಕೆಲಸಕ್ಕೆ ರಂಗಕಲೆಯನ್ನು ಕಲಿಯಲು, ಆಸಕ್ತಿದಾಯಕರು ಯಾರಾದರೂ ಆಗಲಿ, ವೀರಣ್ಣನವರ ಬಳಿ ಬಂದು ಕೇಳಿದಾಗ ಅವರು ಇಲ್ಲ ಎಂಬ ಮಾತೇ ಬರುತ್ತಿರಲಿಲ್ಲ. ಅದು ಗುಬ್ಬಿ ಕಂಪನಿಯು ಇವರ ಚುಕ್ಕಾಣಿಗೆ ಬರುವ ಮುಂಚೆ, ನಂತರ ಇವರ ಮಾಲೀಕತ್ವಕ್ಕೆ ಬಂದ ಮೇಲೂ ಅಷ್ಟೇ. ಹರಸಿ ಬೇಡಿ ಬಂದವರನ್ನು, ಬೇಡ ಅಂದಿದ್ದೆ ಅಲ್ಲ. ಅಂತಹ ಕರುಣಾಮಯಿ ವೀರಣ್ಣನವರು. ಹರಸಿ ಬಂದವರಿಗೆ ಯಾವುದಾದರೂ ಒಂದು ಕೆಲಸವನ್ನು ನೀಡುತ್ತಿದ್ದರು.

ಕಲಾವಿದರು ಅಭಿನಯ ರಂಗಕ್ಕೆರಲು ತಮ್ಮ ಕಲೆಯನ್ನು ತೋರಿಸಲು ವೀರಣ್ಣರವರ ಬಳಿ ಬಂದಾಗ ಅವರನ್ನು ವೇದಿಕೆಯ ಮೇಲೆ ಕಳುಹಿಸುತ್ತಿದ್ದರು, ಅವರು ಆ ವ್ಯಕ್ತಿಯ ಹಿಂದೆ

ಬಹುದೂರ ಕುಳಿತುಕೊಂಡು ಕೇಳುತ್ತಿದ್ದರು. ಏಕೆಂದರೆ, ಎದುರು ನಿಂತಿದ್ದಾಗ ವ್ಯಕ್ತಿಯು ಭಯಪಡಬಹುದೇನೋ ಅಥವಾ ಅವನಿಗೆ ಅಂಜಿಕೆ ಆಗಬಹುದೇನೋ ಎಂಬ ಮನೋಭಾವ. ಎದುರು ಇಲ್ಲದಿದ್ದಾಗ ಅವನು ತನ್ನ ಕಲೆಯನ್ನ ಯಾವುದೇ ಸಂಕೋಚ, ಭಯವಿಲ್ಲದೆ ಧೈರ್ಯದಿಂದ ನಟಿಸುತ್ತಾನೆ ಎಂದು.

ಈ ಕಲಾ ಅನಾವರಣದಲ್ಲಿ ಮುಖ್ಯವಾಗಿ ಆಲಿಸುತ್ತಿದ್ದೆ ಭಾಷೆಯ ಬಳಕೆ. ಲೀಲಾಜಾಲ ಪದಪುಂಜಗಳ ಬಳಕೆ ರಾಗ ತಾಳಗಳನ್ನು, ಸ್ಪಷ್ಟ ಉಚ್ಚಾರಣೆಗಳನ್ನು ಮುಖ್ಯವಾಗಿ ಗಮನಿಸುತ್ತಿದ್ದರು. ಹೀಗೆ ಆಯ್ದು ಆರಿಸಿಕೊಳ್ಳುತ್ತಿದ್ದರು. ಸರಿಯಾಗಿ ಅವು ಬರದೇ ಹೋದವರನ್ನು ಅವರು ಹೊರಗೆ ಕಳುಹಿಸುತ್ತಿರಲಿಲ್ಲ. ಅಲ್ಲಿಗೆ ಕಂಪನಿಯಲ್ಲಿ ಯಾವುದಾದರೂ ಒಂದು ಕೆಲಸವನ್ನು ನೀಡಿ ಅವರನ್ನು ಪ್ರೋತ್ಸಾಹಿಸುತ್ತಿದ್ದರು. ಬಿಡುವಿನ ಸಮಯಗಳಲ್ಲಿ ಅವರಿಗೆ ಅಭ್ಯಾಸಗಳು ಕೂಡ ನಡೆಯುತ್ತಾ ಬಂದವು, ಇದರಿಂದ ಅತ್ಯಂತ ಲೀಲಾಜಾಲವಾಗಿ ಅಭಿನಯಿಸುವಂತಹ ಕಲಾವಿದರು ಕೂಡ ಅಲ್ಲಿ ತಯಾರಾಗುತ್ತಿದ್ದರು.

ಊರೊಳಗೆ ಒಬ್ಬ ತಮಟೆ ಬಡಿದುಕೊಂಡು ಹೋಗಿ ಅಲ್ಲಲ್ಲಿ ನಿಂತು ತಮಟೆ ಬಾರಿಸುವುದು, ಬಾಯಿಂದ ಶಿಳ್ಳಿ ಹಾಕಿ ನಾಟಕವಾಡುವ ಸ್ಥಳ ಟಿಕೇಟು ದರ ಇತ್ಯಾದಿಗಳನ್ನು ಬಾಯಲ್ಲಿ ಕೂಗಿ ಹೇಳಿ, ಮತ್ತೆ ಶಿಳ್ಳೆ ತಮಟೆ ಬಾರಿಸಿಕೊಂಡು ಪ್ರಚಾರಿಸಿ ಬರುತ್ತಿದ್ದರು. ನಾಟಕದ ದೀಪ ವ್ಯವಸ್ಥೆಗೆ ಆಗ್ ಲ್ಯಾಂಪುಗಳ ಚಿಮಣಿ ಒರೆಸಿ ಸುಬ್ರಮಣಿ ಹಾಕಿ ಉರಿಸಿ ಅಣಿ ಮಾಡುತ್ತಿದ್ದರು. ಕ್ರಮೇಣ ಗ್ರೀನ್ ರೂಂನಲ್ಲಿ ಕಸ ಕೊಡಿಸಿ ಹೊಸದಾಗಿ ಬಂದ ನಟರಿಗೆ ಮುಖಕ್ಕೆ ಬಣ್ಣ ಹಾಕುವುದಲ್ಲದೆ ಅವರಿಗೆ ನಾಟಕದ ಉಡುಪುಗಳನ್ನು ಕೊಡುವುದು, ನಾಟಕವಾದ ನಂತರ ಉಡುಪುಗಳನ್ನು ಸರಿಯಾಗಿ ಮಡಿಸಿ ಇಡುವುದು ಡ್ರೆಸ್ ಕೀಪರ್ ಕೆಲಸ. ಅಲ್ಲದೆ ಅಡಿಗೆ ಕೆಲಸದ ಭಟ್ಟರಿಗೆ ಅಸಿಸ್ಟೆಂಟ್ ಆಗಿ ಊಟಕ್ಕೆ ಬಡಿಸುವುದು.

ಕಲಾವಿದ ಎಂದರೆ ಕೇವಲ ಅಭಿನಯವೇ ಅಲ್ಲ ನಾಟಕ ಕಂಪನಿಯಲ್ಲಿ ಸಂಗೀತ ವಾದ್ಯಗಳನ್ನು ನುಡಿಸುವವರು ಕೂಡ ಕಲಾವಿದರಾಗಿದ್ದರು, ಸರಸ್ವತಿ ಪುತ್ರರು. ವಾದ್ಯದವರ ಗೈರುಹಾಜರಿಯಲ್ಲಿ ತಬಲಾ, ಹಾರ್ಮೋನಿಯಂ, ಪಿಟೀಲು ವಾದ್ಯಗಳನ್ನು ಕಲಿಯುವ ಒಂದು ಅವಕಾಶಗಳು ದೊರಕುತ್ತಿದ್ದಿದ್ದು ಕಲಿಯುವಂತಹ ಆಟ ಆಸೆ ಇರುವವರು ಅವಕಾಶಗಳನ್ನು ಬಳಸಿಕೊಳ್ಳುತ್ತಾ ಅದು ಕೂಡ ಒಂದು ಶಾಲೆಯಂತೆಯೇ ಕಲಿಕೆಗೆ ಬಂದ ಉತ್ತಮವಾದಂತಹ ಅವಕಾಶಗಳಾಗಿ ಒದಗುತ್ತವೆ. ಇದರಿಂದ ಒಂದು ಉತ್ತಮ ಕೌಶಲಯುಕ್ತ ನೈಪುಣ್ಯ ಯುಕ್ತ ಸಂಗೀತ ವಾದಕರು ಕಲಾವಿದರು ಹೊರಹೊಮ್ಮುತ್ತಾರೆ.

ಕನ್ನಡ ವೃತ್ತಿ ರಂಗಭೂಮಿಯ ಕಲಾವಿದರು ತಮ್ಮ ಬದುಕನ್ನೇ ರಂಗಭೂಮಿಗಾಗಿ ಮೀಸಲಿಟ್ಟವರು. ಮೊದಮೊದಲು ವೃತ್ತಿರಂಗಭೂಮಿಯಲ್ಲಿ ಹೆಂಗಸರ ಪಾತ್ರವನ್ನು ಸ್ತ್ರೀ ವೇಷಧರಿಸಿ ಅಭಿನಯಿಸುತ್ತಿದ್ದರು, ಕಾಲಾಂತರದಲ್ಲಿ ನಿಧಾನವಾಗಿ ಹೆಣ್ಣು ಮಕ್ಕಳು ರಂಗಭೂಮಿಗೆ ಬರತೊಡಗಿದರು. ಸ್ತ್ರೀ ಪಾತ್ರವಾಗಲಿ ಗಂಡು ಪಾತ್ರವಾಗಲಿ ಬೇರೆ ಯಾರಾದರೂ ನಟ ವರ್ಗದವರ ಗೈರು ಹಾಜರಿಯಲ್ಲಿ ಕಲಿಯುವವರ ಪಾಲಿಗೆ ಬರುತ್ತಿತ್ತು.

ನಾಟಕಗಳು ನಡೆಸುವ ಸಂದರ್ಭಗಳಲ್ಲಿ ಪಾತ್ರಧಾರಿಗಳಿಗೆ ಬಣ್ಣವನ್ನು ಹಾಕುವ ಕೆಲಸ ಬಹು ಮುಖ್ಯ ಹರಿದಾಳ, ಇಂಗ್ಲೀಕ ಸಪೇಧ ಕಾಗೆ ಬಂಗಾರಗಳಿಂದ ಮೇಕಪ್ ಮಾಡುತ್ತಿದ್ದ ಕಾಲ. ಅದು ಹೋಗಿ ಮ್ಯಾಕ್ಸ್ ಫ್ಯಾಕ್ಟರ್ ಬಣ್ಣಗಳನ್ನು ಮತ್ತು ಕ್ರೇಪ್ ಹೇರ್ ಗಳನ್ನು ಉಪಯೋಗಿಸುವವರೆಗೂ ಬಂದಿತ್ತು. ನಾಟಕಗಳಲ್ಲಿ ಮುಖ್ಯವಾಗಿ ಮೇಕಪ್ ಹಾಕುವವರದೇ ಮುಖ್ಯ ಪಾತ್ರ, ಅಂದರೆ ಪಾತ್ರ ದಾರಿಯು ತನ್ನ ಪಾತ್ರವನ್ನು ಅಭಿನಯಿಸುವಾಗ ಅವನ ಮುಖ ಚಹರೆಯನ್ನು ಪಾತ್ರಕ್ಕೆ ಹೊಂದಿಕೊಳ್ಳುವಂತೆ ಮಾಡಲು ಬಣ್ಣವನ್ನು ಹಚ್ಚುತ್ತಾರೆ. ಇದರಿಂದ ಮುಖ ಚಹರೆಯು ತುಂಬಾ ಸುಂದರವಾಗಿ ಕಾಣುವಂತೆ

ಅಭಿನಯದ ಸಮಯದಲ್ಲಿ ಎಲ್ಲಾ ರಸಯುಕ್ತ ಅಭಿನಯ ಹೊರಹೊಮ್ಮುವಂತೆ, ಪಾತ್ರಕ್ಕೆ ಜೀವ ತುಂಬುವಂತೆ, ಪ್ರೇಕ್ಷಕರಲ್ಲಿ ಪಾತ್ರದ ಭಾವನೆ ಪಾತ್ರಧಾರಿಯ ಮೇಕಪ್ ನಿಂದ ಕೂಡಿದ್ದು, ಅದೆಲ್ಲವೂ ಮೇಕಪ್ ನನ್ನು ಬಿಂಬಿಸುತ್ತಿರುತ್ತದೆ. ಆದುದರಿಂದಲೇ ಮಹಾನ್ ಕಲಾವಿದರು ತಮ್ಮ ಪಾತ್ರ ಅಭಿನಯಕ್ಕೆ ಹೊರಡುವ ಮುನ್ನ, ಬಣ್ಣ ಹಾಕಿದವನಿಗೆ ನಮಸ್ಕರಿಸಿ ತದನಂತರ ಬಣ್ಣ ಹಚ್ಚಿಕೊಳ್ಳುತ್ತಿದ್ದರು. ಅಂದರೆ ಕಲಾ ಸರಸ್ವತಿ ಬಣ್ಣದ ಹಚ್ಚುವಿಕೆಯಲ್ಲಿ ಬಹಳ ಗೌರವಯುತವಾಗಿ ನಮಸ್ಕರಿಸುತ್ತಿದ್ದರು. ಬಣ್ಣದಲ್ಲಿ ಮೇಕಪ್ನಲ್ಲಿ ಯಾವ ಲೋಪವೂ ಆಗದಿರಲಿ ಎಂಬಂತೆ. ಗುಬ್ಬಿ ಕಂಪನಿಯಲ್ಲಿ ವೀರಣ್ಣನವರು ಕೂಡ ಬಣ್ಣ ಹಾಕುವ ಮೇಕಪ್ ಮಾಡುವಂತಹ ಕಲೆಯನ್ನು ಕಲಿಸುತ್ತಿದ್ದರು. ಆ ಮೇಕಪ್ ಮಾಡುವಂತಹದರಲ್ಲಿ ಬಣ್ಣವನ್ನು ಸಮಾನವಾಗಿ ಬೆರೆಸುವ ಕಲೆ ತುಂಬಾ ಮುಖ್ಯ. ಕೊಂಚ ಹೆಚ್ಚಲು ಬಾರದು, ಕಡಿಮೆಯೂ ಆಗದಂತೆ ಪಾತ್ರ ಮತ್ತು ಸನ್ನಿವೇಶಕ್ಕೆ ತಕ್ಕಂತೆ ಬೆರೆಸುವಂತಹ ಕಲೆ ಕೌಶಲ್ಯಗಳನ್ನು ಕಲಿಸುತ್ತಿದ್ದರು.

ಗುಬ್ಬಿ ವೀರಣ್ಣ ನಾಟಕ ಕಂಪನಿಯಲ್ಲಿ ಬಣ್ಣ ಹಾಕುವುದಲ್ಲದೆ ನಂತರ ದೀಪಗಳನ್ನು ವಿದ್ಯುತ್ ಚಾಲಿತಗೊಳಿಸಿ ವಿವಿಧ ತಂತ್ರಾಂಶಗಳನ್ನು ಬಳಸುತ್ತಿದ್ದರು. ಎಲೆಕ್ಟ್ರಿಕಲ್ ತಂತ್ರಾಂಶ ನಿಯೋಜಿತ ಕೆಲಸಗಾರರು ಅತಿ ಹೆಚ್ಚು ಶ್ರಮವಹಿಸುತ್ತಿದ್ದರು. ಬೆಳಗ್ಗೆ ರಾತ್ರಿಯೆಲ್ಲ ಇವರು ಒಂದೇ ಸಮನೆ ಕೆಲಸ ನಿರ್ವಹಿಸುತ್ತಿದ್ದರು. ಇವರಲ್ಲದೆ ಎಲ್ಲಾ ಕೆಲಸ ನಿರ್ವಹಿಸುವವರೆಲ್ಲರಿಗೂ ವೀರಣ್ಣರವರು ಭಾನುವಾರದಂದು ಕಂಪನಿಯ ಕೆಲಸಗಾರರಿಗೆಲ್ಲರಿಗೂ ಕೂಡ ಅರಳೆಣ್ಣೆಯನ್ನು ಮೈಗೆ ತಲೆಗೆ ಹಚ್ಚಿಕೊಳ್ಳಬೇಕು, ನಂತರ ಸ್ನಾನ ಮಾಡಬೇಕು. ಏಕೆಂದರೆ ಅತಿ ಹೆಚ್ಚು ಕೆಲಸ ನಿರ್ವಹಿಸುತ್ತಿದ್ದರಿಂದ ದೇಹ ಅತಿ ಉಷ್ಣದಿಂದ ತುಂಬಿ ಅನಾರೋಗ್ಯವಾಗುತ್ತದೆ. ಆದ್ದರಿಂದ ಅರಳೆಣ್ಣೆ ಸ್ನಾನ ಮಾಡಿ ಅಂದು ಎಲ್ಲರಿಗೂ ಗಸಗಸೆ ಪಾಯಸವನ್ನು ಮಾಡಿಸುತ್ತಿದ್ದರು. ಹೆಚ್ಚಾಗಿ ಮಾಡಿಸಿ ಎಲ್ಲರೂ ಅಂದು ಪಾಯಸ ಸವಿಯ ಬೇಕಾಗಿತ್ತು.

ಗುಬ್ಬಿ ಕಂಪನಿಯು ನಾಟಕಗಳನ್ನು ಏರ್ಪಡಿಸಿದಾಗ ಕೆಲವು ಬಾರಿ ಪಾತ್ರಧಾರಿಗಳ ಅಭಾವ, ಪಾತ್ರಧಾರಿಗಳ ಅನಾರೋಗ್ಯ, ಗೈರುಹಾಜರಿ ಇಂತಹ ಅನೇಕ ಸನ್ನಿವೇಶಗಳು ಬಂದೊದಗಿದಾಗ ಅವುಗಳನ್ನು ನಿಭಾಯಿಸಲು ಅಲ್ಲಿಗೆ ಬದಲಿ ಪಾತ್ರಧಾರಿಗಳನ್ನು ಆ ಸಮಯದಲ್ಲಿ ಅಲ್ಲಿರುವಂತಹ ಕೆಲವರಿಗೆ ಅವಕಾಶಗಳು ಸಿಕ್ಕಿ, ಅದು ಜನ ಮೆಚ್ಚುಗೆಗೊಂಡರೆ ಅದು ಅತಿ ಪ್ರಭಾವ ಬೀರುತ್ತಿದ್ದವು. ಗುಬ್ಬಿ ಕಂಪನಿಯಲ್ಲಿನ ಎಲ್ಲಾ ಕೆಲಸಗಾರರಿಗೂ ಒಂದೊಳ್ಳೆಯ ಸಂಸ್ಕೃತಿ ಸಂಸ್ಕಾರಗಳನ್ನು ಕಲಿಸುತ್ತಾ, ದೈವಭಕ್ತಿ ಪ್ರಾರ್ಥನೆ ಧ್ಯಾನ ಭಕ್ತಿ ಮತ್ತು ಕಲಾಭಕ್ತಿಯನ್ನು ಕಲಿಸುತ್ತಾ, ಒಂದು ಸುಸಂಸ್ಕೃತವಾದಂತಹ ಮೌಲ್ಯಗಳನ್ನು ತುಂಬುತ್ತಾ ಬರುತ್ತಾರೆ.

ನಾಟಕದಲ್ಲಿ ಅತಿ ಮುಖ್ಯವಾಗಿ ಸಂಗೀತ, ಅಭಿನಯ, ಬಣ್ಣ, ರಮಣೀಯ ಅಲಂಕಾರಗಳಲ್ಲಿ ಮುಖ್ಯವಾಗಿ ಅಭಿನಯದಲ್ಲಿ ಧ್ವನಿ ಬಹಳ ಮುಖ್ಯ. ಯಾವ ಸಮಯದಲ್ಲಿ, ಯಾವ ಸಂದರ್ಭದಲ್ಲಿ, ಯಾವ ಸನ್ನಿವೇಶದಲ್ಲಿ, ಧ್ವನಿ ಮಾತು ಎಷ್ಟು ಪ್ರಕಾರತೆಯನ್ನು ಬೀರಬೇಕು ಎಂಬುದು. ಭಾವಭಿನಯ, ಮುಕಾಭಿನಯ, ನಯನಾಭಿನಯ, ಶರೀರ ಅಭಿನಯ, ಶರೀರವೇ ಒಂದು ಭಾಷೆಯಾಗಿ ಬಿಂಬಿಸುವಂತಹ ಒಂದು ಉತ್ತಮ ಕಲಾ ತಯಾರಿಯನ್ನು ಮಾಡುತ್ತಿದ್ದಿದ್ದುಂಟು.

ಗುಬ್ಬಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಂತಹ ಕೆಲಸಗಾರರು ಕಲಾವಿದರು ವಾದ್ಯಕರು ಒಟ್ಟಾರೆ ಒಂದು ಸಮೂಹ, ಇವರನ್ನು, ಇವರ ಮಕ್ಕಳನ್ನೇ ಕೆಲ ಬಾರಿ ಅವಶ್ಯಕ ಸಮಯದಲ್ಲಿ ಬಳಸಿಕೊಂಡು ಕೆಲ ಪಾತ್ರ ನೀಡಿ ಅಭಿನಯಿಸುವಂತೆ ಪ್ರೇರೇಪಿಸುತ್ತಿದ್ದರು. ವೀರಣ್ಣನವರು ತಮ್ಮ ಮಕ್ಕಳು ಮೊಮ್ಮಕ್ಕಳನ್ನು ಕೂಡ ಈ ನಾಟಕ ಕಂಪನಿಯಲ್ಲಿ ಅಭಿನಯಿಸುವಂತೆ ಮಾಡಿದ್ದಾರೆ. ಈ ಗುಬ್ಬಿ ನಾಟಕ

ಕಂಪನಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದವರನ್ನೆಲ್ಲರನ್ನೂ ತಮ್ಮ ಮಕ್ಕಳಂತೆ ಕಾಣುತ್ತಾ ಬಂದವರು ವೀರಣ್ಣರವರು.

ಅನೇಕ ನಾಟಕ ಕಂಪನಿಗಳನ್ನು ಹೋಲಿಸಿಕೊಂಡರೆ, ಗುಬ್ಬಿ ಕಂಪನಿಯ ನಾಟಕಗಳ ವಿಶಿಷ್ಟತೆ ಮತ್ತು ಪ್ರಭಾವ ಪ್ರೇಕ್ಷಕರ ಮೇಲಿತ್ತು. ಬೇರೆ ನಾಟಕ ಕಂಪನಿಯಲ್ಲಿ ರೌದ್ರತೆ ಕಡಿಮೆ ಇದ್ದು, ಪದಗಳು ಶಬ್ದಗಳು ಸಂಭಾಷಣೆಗಳು ಕೇವಲ ಕಂಠಸ್ತದಿಂದಲೇ ಬರುತ್ತಿದ್ದು, ಬಹು ರೌದ್ರತೆ ಕಡಿಮೆ, ವಿರವೇಶವು ಹಾಗೆ. ಆದರೆ ಗುಬ್ಬಿ ಕಂಪನಿಯ ನಾಟಕಗಳಲ್ಲಿ ಅತೀ ರೌದ್ರತೆಯನ್ನು ಸಹ ನಾವು ಕಾಣಬಹುದಾಗಿದೆ. ಅಂದರೆ ಯಾವುದೇ ಸನ್ನಿವೇಶಗಳು ಬಂದರೂ ವಕ್ಷ ನಾಭಿ ಎದೆಗಾರಿಕೆಯಿಂದ ಸಂಭಾಷಣೆಗಳು ಬರುತ್ತಿದ್ದವು. ಶಬ್ದಗಳು ಧ್ವನಿಯಲ್ಲಿ ಕಿವಿಗೆ ಅಪ್ಪಳಿಸುವಂತೆ ಪ್ರೇಕ್ಷಕನನ್ನು ಕೆರಳಿಸುವಂತೆ ಕಾತುರತೆ ಉಮ್ಮೇಳಿಸುವಂತೆ ಇದ್ದವು. ಕೆಲ ಸನ್ನಿವೇಶ ರಸಯುಕ್ತ ಅಂತಕರಣ ಕರಗಿ ಹಿಮ್ಮಡಿಸುವಂತಹ ಅಭಿನಯ ಶಬ್ದತಿಯನ್ನು ನಾಟಕ ಕಂಪನಿ ಮಾಡುತ್ತಿದ್ದು, ಇದರಿಂದ ಅನೇಕ ಉತ್ತಮ ಕಲಾವಿದರು ನಟ ನಟಿಯರು ತಯಾರಿಗೊಂಡು ಇಲ್ಲಿ ಪಳಗಿ ಬಂದಿದ್ದಾರೆ.

ಅನಂತರಾಮಯ್ಯರೆಂಬ ಕವಿಗಳಿಂದ 'ಲವಕುಶ' ನಾಟಕವನ್ನು ತುಮಕೂರಿನ ಅದಲು ಅಭ್ಯಾಸಕ್ಕೆ ತೆಗೆದುಕೊಂಡರು. ತಾರೀಕು 13/12/1962 ರಲ್ಲಿ ತುಮಕೂರಿನಲ್ಲಿ ಲವಕುಶ ನಾಟಕ ಪ್ರಾರಂಭೋತ್ಸವವನ್ನು ಮಾಡಿ ನಾಟಕ ಮಾಡಿದರು. ಅವರ ಮನೆಯವರೇ ಮಾಡಿದ್ದು ಗುಬ್ಬಿ ವೀರಣ್ಣರವರ ಮೊಮ್ಮಕ್ಕಳಾದ ಜಯಶ್ರೀ ಎಂಬ ನಟಿ ಗಂಗಮ್ಮನೆಂಬ ನಟಿಯು ಲವಕುಶ ಪಾತ್ರವನ್ನು, ರಾಮನ ಪಾತ್ರವನ್ನು ಅಳಿಯ ಬಸವರಾಜು, ಸೀತೆಯ ಪಾತ್ರವನ್ನು ಮಗಳಾದ ಮಾಲತಮ್ಮ ಮಾಡಿ ಕೀರ್ತಿಯನ್ನು ತಂದರು. ಗುಬ್ಬಿ ವೀರಣ್ಣ ರವರು ಕೂಡ ಎಲ್ಲಾ ಪಾತ್ರಗಳನ್ನು ನಿರ್ವಹಿಸುತ್ತಿದ್ದರು. ಮೈಸೂರು ಒಡೆಯರು ಇವರನ್ನು ನಾಟಕದಲ್ಲಿ ನೀವು ಅಭಿನಯಿಸುತ್ತಿಲ್ಲವೇ? ಎಂದರಂತೆ, ಇಲ್ಲ ಎಂದಾಗ ಅವರೇ ಹೇಳಿ "ನೀವು ಒಂದೇ ಒಂದು ಬಾರಿ ಹಾಗೆ ಹೋಗಿ, ಹೀಗೆ ಬನ್ನಿ ಅಷ್ಟೇ" ಎಂದು ಹೇಳಿ ಆಡಿಸಿದ್ದರಂತೆ. ವೀರಣ್ಣರವರು ಹೆಚ್ಚು ಹಾಸ್ಯಯುಕ್ತ ನಟನೆಯನ್ನು ಮಾಡುತ್ತಾ ಎಲ್ಲರನ್ನೂ ನಗಿಸುತ್ತಿದ್ದರು ಇವರಿಗೆ 'ಹಾಸ್ಯರತ್ನ' ಪ್ರಶಸ್ತಿಯನ್ನು ನೀಡಿದ್ದಾರೆ.

ಮೂರು ತಲೆಮಾರುಗಳ ಆಡಳಿತ ವರ್ಗ ಮತ್ತು ನಟ ನಟಿಯರನ್ನು ಕಂಡ ಗುಬ್ಬಿ ಕಂಪನಿಯಲ್ಲಿ ಪಳಗಿದವರು ಗುಬ್ಬಿ ನಾಟಕ ಕಂಪನಿಯಲ್ಲಿ ಕಲಿತಂತಹ ಕಲೆ ಭಕ್ತಿ ಸಂಸ್ಕೃತಿಗಳಿಂದ ರಂಗಭೂಮಿಯ ಇತಿಹಾಸದಲ್ಲಿ ಉತ್ತಮ ಕಲಾವಿದರಾಗಿ ಶಾಶ್ವತವಾದ ಹೆಸರು ಪಡೆದಿದ್ದಾರೆ. ಕನ್ನಡದ ರಂಗಭೂಮಿ ಮತ್ತು ಚಲನಚಿತ್ರ ಕ್ಷೇತ್ರದಲ್ಲಿ ಹೆಸರಾದವರು ಒಂದಲ್ಲ ಒಂದು ಬಾರಿ ಗುಬ್ಬಿ ನಾಟಕ ಕಂಪನಿಯಲ್ಲಿ ಇದ್ದವರೆ. ಸಿ.ಜಿ. ಮಲ್ಲಪ್ಪ, ಗಂಗಾಧರರಾವ್, ಗುರುಮೂರ್ತಪ್ಪ, ಸುಂದರಮ್ಮ, ಅಶ್ವತಮ್ಮ, ಬಿ.ಜಯಮ್ಮ, ಎಂ.ವಿ.ಸುಬ್ಬಯ್ಯ ನಾಯ್ಡು, ಹಿರಣ್ಣಯ್ಯ, ರಾಜಮ್ಮ, ಹೊನ್ನಪ್ಪ ಭಾಗವತರ್, ಬಿ.ಎನ್.ಚಿನ್ನಪ್ಪ, ಬಿ.ವಿ.ಕಾರಂತ, ಎಂ.ವಿ.ವಾಸುದೇವ ರಾವ್, ರಾಜಕುಮಾರ್ ಮುಂತಾದ ಕೆಲವರನ್ನು ಇಲ್ಲಿ ಸ್ಮರಿಸಬಹುದು.

ಕನ್ನಡ ರಂಗಭೂಮಿಗೆ ತನ್ನದೇ ಆದ ವೈವಿಧ್ಯಮಯ ಕಲೆ ಧ್ವನಿ ವೇದಿಕೆ ನಟನೆ ಇನ್ನಿತರೆ ವೈವಿಧ್ಯಮಯ ಕೊಡುಗೆಯನ್ನು ನೀಡಿದ ಶ್ರೀ ಚನ್ನಬಸವೇಶ್ವರ ಕೃಪಾಪೋಷಿತ ನಾಟಕ ಮಂಡಳಿ ವೃತ್ತಿರಂಗಭೂಮಿಯಲ್ಲಿ ಉತ್ತಮ ಕಲಾವಿದರನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸಿದೆ ಅನೇಕ ಕಲಾವಿದರ ಜೊತೆ ಅಸಮಾನ್ಯ ಜನರ ಮನಸ್ಸಿನಲ್ಲಿ ಅಜರಾಮರವಾಗಿದೆ.

**ಪರಾಮರ್ಶನ ಗ್ರಂಥಗಳು**


- ಅಲ್ಲಾಗಿರಿರಾಜ್ ಕನಕಗಿರಿ. (2020). *ರಂಗಭೂಮಿ ಸರದಾರ ಚಿಕ್ಕಪ್ಪಯ್ಯ ಬಣ್ಣ ಬದುಕು ಬಯಲು ಬೆಳಕು.* ಸಾತ್ವಿಕ ಪ್ರಕಾಶನ.

- ಬಸವರಾಜ ಡೋಣೂರ. (2007). *ಕನ್ನಡ ನಾಟಕ ಮತ್ತು ರಂಗಭೂಮಿ.* ನೀಲ ಪರ್ವತ ಪ್ರಕಾಶನ.
- ದಳವಾಯಿ. (2020). *ತುಮಕೂರಿನಲ್ಲಿ ರಾಮಾಯಣ, ಮಹಾಭಾರತ, ಸದಾ ಜೀವಂತ.* ಸಾತ್ವಿಕ ಪ್ರಕಾಶನ.
- ಜಯಶ್ರೀ, ಬಿ. (2010). *ಜಿ ಹೆಚ್. ವೀರಣ್ಣ ಕಲೆಯೇ ಕಾಯಕ.* ಕನ್ನಡ ಸಾಹಿತ್ಯ ಪರಿಷತ್ತು.
- ಮರುಳಸಿದ್ದಪ್ಪ, ಕೆ. (1983). *ಆಧುನಿಕ ಕನ್ನಡ ನಾಟಕ.* ಅಂಕಿತ ಪುಸ್ತಕ.
- ನರಸಿಂಹಮೂರ್ತಿ ಹೆಚ್.ಕೆ. (2010). *ನಾಟಕರತ್ನ ಗುಬ್ಬಿವೀರಣ್ಣ ಲೆಟರ್.*